

بسم اللهِ الرّحمٰنِ الرّحيم

# ಪ್ರವಾದಿ ಚರಿತ್ರೆ – ಹುದೈಬಿಯಾ ಸಂಧಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **06-12-2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಇಂದು ಹುದೈಬಿಯಾ ಸಂಧಿಗೆ ಸಂಬಂಧಿಸಿ ಇನ್ನಷ್ಟು ವಿವರಿಸುತ್ತೇನೆ. ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಒಪ್ಪಂದಗಳಲ್ಲಿ ಕೊರತೆಗಳು ಇರುತ್ತವೆ. ಅವು ಕೆಲವೊಮ್ಮೆ ಹಿರಿದಾದ ಫಲಿತಾಂಶಗಳಿಗೆ ಕಾರಣವಾಗುತ್ತವೆ. ಹುದೈಬಿಯಾ ಸಂಧಿಯಲ್ಲೂ ಕೊರತೆಯಿತ್ತು. ಮುಸ್ಲಿಮ್ ಪುರುಷರು ಮದೀನಕ್ಕೆ ಬಂದರೆ ಅವರನ್ನು ಮರಳಿ ಕಳುಹಿಸಬೇಕು ಎಂದು ಈ ಒಪ್ಪಂದದಲ್ಲಿ ಸ್ಪಷ್ಟವಾಗಿ ಪ್ರಸ್ತಾಪಿಸಲಾಗಿತ್ತು. ಆದರೆ ಮುಸ್ಲಿಂ ಮಹಿಳೆಯರ ಕುರಿತು ಯಾವುದೇ ಪ್ರಸ್ತಾಪವಿರಲಿಲ್ಲ.

ಒಪ್ಪಂದವಾಗಿ ಕೆಲವೇ ದಿನಗಳು ಆಗಿದ್ದುವು. ಅಷ್ಟರಲ್ಲಿ ಕೆಲವು ಮುಸ್ಲಿಂ ಮಹಿಳೆಯರು ಮಕ್ಕಾದ ಸತ್ಯನಿಷೇಧಿಗಳಿಂದ ತಪ್ಪಿಸಿಕೊಂಡು ಮದೀನಕ್ಕೆ ತಲುಪಿದರು. ಅವರಲ್ಲಿ ಮೊತ್ತಮೊದಲಿಗೆ ಮಕ್ಕಾದ ಮೃತಪಟ್ಟ ಮುಶ್ರಿಕ್ ಮುಖಂಡನಾದ ಉಖ್ಬ ಬಿನ್ ಅಬೀ ಮುಈತ್‌ನ ಪುತ್ರಿ ಉಮ್ಮು ಕುಲ್ಸುಮ್ ಇದ್ದರು. ಅವರು ತಾಯಿಯ ಕಡೆಯಿಂದ ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ)ರ ಸಹೋದರಿಯಾಗಿದ್ದರು. ಉಮ್ಮು ಕುಲ್ಸುಮ್ ಬಹಳ ಧೈರ್ಯದಿಂದ ದೀರ್ಘವಾದ ಯಾತ್ರೆಯನ್ನು ಕಾಲ್ನಡಿಗೆಯಾಗಿ ಮದೀನಕ್ಕೆ ತಲುಪಿ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಹೋಗಿ ಇಸ್ಲಾಂ ಧರ್ಮ ಸ್ವೀಕರಿಸಿದ್ದಾಗಿ ಹೇಳಿದರು. ಅವರನ್ನು ಹಿಂಬಾಲಿಸುತ್ತಾ ಅವರ ಎರಡು ಸತ್ಯನಿಷೇಧಿಗಳಾದ ಸಂಬಂಧಿಕರು ಕೂಡ ಬಂದು ಅವರನ್ನು ಮರಳಿ ಮಕ್ಕಕ್ಕೆ ಕಳುಹಿಸಲು ಬೇಡಿಕೆ ಇಟ್ಟರು. ಒಪ್ಪಂದದಲ್ಲಿ ಕೇವಲ ಪುರುಷ ಎಂಬ ಪದವನ್ನು ಬಳಸಲಾಗಿದ್ದರೂ ಒಪ್ಪಂದ ಸಾರ್ವತ್ರಿಕವಾಗಿದೆ ಹಾಗೂ ಅದು ಪುರುಷರಿಗೂ ಮತ್ತು ಮಹಿಳೆಯರಿಗೂ ಅನ್ವಯಿಸುತ್ತದೆ ಎಂದು ಅವರು ಹೇಳುತ್ತಿದ್ದರು. ಆದರೆ ಒಪ್ಪಂದದಲ್ಲಿ ಬಳಸಲಾದ ಪದದ ಕಾರಣದಿಂದಲೂ ಮಹಿಳೆಯರು ದುರ್ಬಲರು ಎಂಬ ಕಾರಣದಿಂದಲೂ ಉಮ್ಮು ಕುಲ್ಸುಮ್ ಮರಳಿ ಹೋಗಲು ತಯಾರಿರಲಿಲ್ಲ.

ಹಝ್ರತ್ ಪೈಗಂಬರ್(ಸ) ಸಹಜವಾಗಿ ಮತ್ತು ನ್ಯಾಯಯುತವಾಗಿ ಉಮ್ಮು ಕುಲ್ಸುಮ್‌ರ ಪರವಾಗಿ ತೀರ್ಪು ನೀಡಿದರು. ಆ ದಿನಗಳಲ್ಲಿ ಈ ಕುರಿತು ಪವಿತ್ರ ಖುರ್‌ಆನಿನ ಕೆಲವು ವಚನಗಳು ಅವತೀರ್ಣಗೊಂಡುವು. ಅದೇನೆಂದರೆ, ಮಕ್ಕಾದಿಂದ ಮದೀನಕ್ಕೆ ಮಹಿಳೆಯೊಬ್ಬಳು ಬಂದರೆ ಅವರ ಬಗ್ಗೆ ಸರಿಯಾಗಿ ತನಿಖೆ ನಡೆಸಿರಿ. ಬಂದವಳು ಒಳ್ಳೆಯವಳು ಮತ್ತು ಪ್ರಾಮಾಣಿಕಳೆಂದು ರುಜುವಾತಾದರೆ ಅವಳನ್ನು ಖಂಡಿತವಾಗಿಯೂ ಮರಳಿ ಕಳುಹಿಸಬೇಡಿರಿ. ಇನ್ನು ಅವಳು ವಿವಾಹಿತೆಯಾಗಿದ್ದರೆ ಅವಳ ಮಹರ್ ಧನವನ್ನು ಅವಳ ಮುಶ್ರಿಕ್ ಪತಿಗೆ ಪಾವತಿಸತಕ್ಕದು.

ಒಪ್ಪಂದದ ಒಂದು ನಿಬಂಧನೆಯೇನಾಗಿತ್ತು ಎಂದರೆ, ಮುಸ್ಲಿಮನಾದ ಒಬ್ಬ ಪುರುಷನು ಮಕ್ಕದಿಂದ ಮದೀನಕ್ಕೆ ಹೋದರೆ ಆತನನ್ನು ಮರಳಿ ಕಳುಹಿಸಬೇಕು. ಆದರೆ ಒಬ್ಬ ಪುರುಷನು ಮದೀನದಿಂದ ಮಕ್ಕಾಗೆ ಹೋದರೆ ಆತನನ್ನು ಸತ್ಯನಿಷೇಧಿಗಳು ಮರಳಿ ಕಳುಹಿಸಬೇಕಾಗಿಲ್ಲ. ಬಾಹ್ಯವಾಗಿ ನೋಡುವುದಾದರೆ ಈ ನಿಬಂಧನೆಯಿಂದ ಮುಸ್ಲಿಮರನ್ನು ನಿಂದಿಸಲು ಉದ್ದೇಶಿಸಲಾಗಿತ್ತು. ಆದರೆ ಸತ್ಯದಲ್ಲಿ ಅದು ಹಾಗೆ ಆಗಿರಲಿಲ್ಲ. ಆರಂಭದಲ್ಲೇ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದರು: ಸರಿ, ಯಾವ ವ್ಯಕ್ತಿ ಮದೀನವನ್ನು ಬಿಟ್ಟು ಮುಸ್ಲಿಮರಿಂದ ಬೇರ್ಪಡುತ್ತಾನೋ ಅಂತಹ ಕಪಟವಿಶ್ವಾಸಿ ಮತ್ತು ಕೊಳಕು ಅಂಗವನ್ನು ಮದೀನಕ್ಕೆ ಮರಳಿ ತರುವ ಅಗತ್ಯವೇನಿದೆ?

ಒಪ್ಪಂದವಾಗಿ ಕೆಲವೇ ಕಾಲ ಕಳೆಯುವಷ್ಟರಲ್ಲಿ ಮಕ್ಕಾ ನಿವಾಸಿಯಾದ ಅಬೂ ಬಸೀರ್ ಎಂಬವನು ಮುಸ್ಲಿಮನಾಗಿ ಮದೀನಕ್ಕೆ ಬಂದನು. ಆದರೆ ಒಪ್ಪಂದದ ಪ್ರಕಾರ ಸತ್ಯನಿಷೇಧಿಗಳ ಬೇಡಿಕೆಯಂತೆ ಹಝ್ರತ್ ಪೈಗಂಬರ್(ಸ) ಅವನನ್ನು ಸತ್ಯನಿಷೇಧಿಗಳ ಜೊತೆಗೆ ಮರಳಿ ಕಳುಹಿಸಿದರು. ಸತ್ಯನಿಷೇಧಿಗಳ ಆ ತಂಡ ಅವನ ಜೊತೆಗೆ ಮರಳಿ ಹೋಗುತ್ತಿದ್ದಾಗ ಮಾರ್ಗದಲ್ಲಿ ಅವನು ಆ ಸಂಘದ ಮುಖಂಡನನ್ನು ವಧಿಸಿದನು. ಮತ್ತೊಬ್ಬನು ಪರಾರಿಯಾಗಿ ಮದೀನಕ್ಕೆ ಬಂದನು. ಅವನನ್ನು ಹಿಂಬಾಲಿಸಿ ಅಬೂ ಬಸೀರ್ ಕೂಡ ಮದೀನಕ್ಕೆ ಬಂದನು. ಅಬೂ ಬಸೀರ್ ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿದನು: ನೀವು ನನ್ನನ್ನು ಸತ್ಯನಿಷೇಧಿಗಳಿಗೆ ಒಪ್ಪಿಸಿದ್ದೀರಿ. ನಿಮ್ಮ ಹೊಣೆಗಾರಿಕೆ ಅಲ್ಲಿಗೆ ಮುಗಿಯಿತು. ಆದರೆ ಈಗ ಅಲ್ಲಾಹನು ದುಷ್ಟ ಸಮುದಾಯದಿಂದ ನನಗೆ ಮುಕ್ತಿ ನೀಡಿದ್ದಾನೆ. ಹಝ್ರತ್ ಪೈಗಂಬರ್(ಸ) ಹೇಳಿದರು: 'ಈ ವ್ಯಕ್ತಿ ಯುದ್ಧದ ಬೆಂಕಿಯನ್ನು ಹೊತ್ತಿಸುತ್ತಿದ್ದಾನೆ.' ಒಪ್ಪಂದದ ಕಾರಣದಿಂದ ಹೇಗಿದ್ದರೂ ಹಝ್ರತ್ ಪೈಗಂಬರ್(ಸ) ಅವನೊಡನೆ ಮರಳಿ ಹೋಗಲು ಹೇಳುವರು ಎಂದು ಅರಿತುಕೊಂಡ ಅಬೂ ಬಸೀರ್ ರಹಸ್ಯವಾಗಿ ಮದೀನದಿಂದ ಹೊರಟು ಹೋಗಿ ಬೇರೊಂದು ಪ್ರದೇಶದಲ್ಲಿ ತನ್ನ ನಿವಾಸವನ್ನು ಮಾಡಿಕೊಂಡನು. ಅಬೂ ಬಸೀರ್ ಬೇರೊಂದು ನಿವಾಸವನ್ನು ಮಾಡಿಕೊಂಡ ಬಗ್ಗೆ ಮಕ್ಕಾದ ಇತರ ದುರ್ಬಲ ಮುಸ್ಲಿಮರಿಗೆ ಗೊತ್ತಾದಾಗ ಅವರು ಕೂಡ ಮೆಲ್ಲಮೆಲ್ಲನೆ ಅಲ್ಲಿ ಒಟ್ಟುಗೂಡಲು ಆರಂಭಿಸಿದರು. ಆ ಜನರಲ್ಲಿ ಮಕ್ಕಾದ ಸರದಾರ ಸುಹೈಲ್ ಬಿನ್ ಅಮ್ರ್‌ನ ಪುತ್ರನಾದ ಅಬೂಜಂದಲ್ ಕೂಡ

ಇದ್ದನು. ಹಾಗೆ ಅಲ್ಲಿ ಒಟ್ಟುಗೂಡಿದವರ ಸಂಖ್ಯೆ ಎಪ್ಪತ್ತು ಆಗಿತ್ತು ಎಂದೂ ಮುನ್ನೂರು ಆಗಿತ್ತು ಎಂದೂ ಕೆಲವು ವರದಿಗಳಲ್ಲಿ ಬಂದಿದೆ. ಹೀಗೆ ಮೆಲ್ಲಮೆಲ್ಲನೆ ಮದೀನವಲ್ಲದೆ ಬೇರೊಂದು ಮುಸ್ಲಿಂ ವಸತಿ ಅಸ್ತಿತ್ವಕ್ಕೆ ಬಂತು. ಈ ಪ್ರದೇಶ ಸಿರಿಯಾದ ಮಾರ್ಗದಲ್ಲಿ ಇದ್ದ ಕಾರಣದಿಂದ ಹೆಚ್ಚಾಗಿ ಸತ್ಯನಿಷೇಧಿಗಳೊಂದಿಗೆ ಈ ಮುಸ್ಲಿಮರ ಮುಖಾಮುಖಿಯಾಗುತ್ತಿತ್ತು. ಈ ಹೊಸ ಯುದ್ಧದಿಂದ ಬೇಸತ್ತು ಆ ಮುಸ್ಲಿಮರನ್ನು ಮದೀನಕ್ಕೆ ಕಳುಹಿಸಿರಿ ಎಂದು ಸ್ವತಃ ಸತ್ಯನಿಷೇಧಿಗಳು ರಾಯಭಾರಿಗಳ ಮೂಲಕ ಹಝ್ರತ್ ಪೈಗಂಬರ್(ಸ)ರೊಡನೆ ವಿನಂತಿಸಿಕೊಂಡರು. ಹಝ್ರತ್ ಪೈಗಂಬರ್(ಸ)ರ ಪತ್ರ ಅಬೂ ಜಂದಲ್ ಮತ್ತು ಅಬೂ ಬಸೀರಿಗೆ ತಲುಪಿದ ವೇಳೆ ಅಬೂಬಸೀರ್ ರೋಗಿಯಾಗಿ ಹಾಸಿಗೆಯಲ್ಲಿದ್ದರು. ಅವರು ಬಹಳ ಆಸಕ್ತಿಯಿಂದ ಹಝ್ರತ್ ಪೈಗಂಬರ್(ಸ)ರ ಆ ಪತ್ರವನ್ನು ಕೈಯಲ್ಲಿ ಗಟ್ಟಿಯಾಗಿ ಹಿಡಿದರು ಮತ್ತು ಅದೇ ಸ್ಥಿತಿಯಲ್ಲಿ ಅವರ ನಿಧನವಾಯಿತು. ಅನಂತರ ಇತರ ಮುಸ್ಲಿಮರು ಮದೀನಕ್ಕೆ ಹೋದರು.

ಪೌರಸ್ತ್ಯರು ತಮ್ಮ ಅಭ್ಯಾಸದಂತೆ ಇದರ ಕುರಿತು ಆಕ್ಷೇಪಿಸುತ್ತಾರೆ. ಅಂತಹ ಆಕ್ಷೇಪಗಳಲ್ಲಿ ಎರಡು ಆಕ್ಷೇಪಗಳ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ವಿಶ್ಲೇಷಣೆ ನಡೆಸಿರುವರು. ಮೊದಲನೆಯದು ಮಹಿಳೆಯರನ್ನು ಮರಳಿಸದೇ ಒಪ್ಪಂದವನ್ನು ಉಲ್ಲಂಘಿಸಿದರೆಂಬ ಆಕ್ಷೇಪವಾಗಿದೆ. ಎರಡನೆಯ ಆಕ್ಷೇಪ ಅಬೂ ಬಸೀರ್ ಮತ್ತು ಅಬೂಜಂದಲಿನ ಘಟನೆಯ ಬಗ್ಗೆಯಾಗಿದೆ.

ಈ ಆಕ್ಷೇಪಗಳ ಬಗ್ಗೆ ಉತ್ತರಿಸುವಾಗ ನೆನಪಿಡಬೇಕಾದ ಸಂಗತಿಯೇನೆಂದರೆ, ಪ್ರಥಮವಾಗಿ ಈ ಒಪ್ಪಂದ ಮಕ್ಕಾದ ಸತ್ಯನಿಷೇಧಿಗಳೊಂದಿಗೆ ನಡೆದಿತ್ತು. ಅವರಾದರೋ ಮೊದಲಿನಿಂದಲೇ ಮುಸ್ಲಿಮರ ವಿರುದ್ಧ ಯುದ್ಧದಲ್ಲಿ ನಿರತರಾಗಿದ್ದರು. ಹಝ್ರತ್ ಪೈಗಂಬರ್(ಸ) ಎಂದಿಗೂ ಒಪ್ಪಂದವನ್ನು ಉಲ್ಲಂಘಿಸಿಲ್ಲ ಎಂದು ಸ್ವತಃ ಮಕ್ಕಾದ ಸತ್ಯನಿಷೇಧಿಗಳ ಸಾಕ್ಷ್ಯವಿದೆ. ಉದಾಹರಣೆಗೆ ರೋಮಿನ ಅರಸನಾದ ಹರ್ಕ್ಯುಲಸ್‌ಗೆ ಹಝ್ರತ್ ಪೈಗಂಬರ್(ಸ)ರ ಇಸ್ಲಾಮಿನ ಸಂದೇಶವನ್ನು ಒಳಗೊಂಡ ಪತ್ರ ಲಭಿಸಿದಾಗ ಆತನು ಆ ವೇಳೆ ಸಿರಿಯಾದಲ್ಲಿದ್ದ ಸತ್ಯನಿಷೇಧಿಗಳ ಮುಖಂಡನಾದ ಅಬೂಸುಫ್‌ಯಾನನ್ನು ಕರೆಸಿದನು ಮತ್ತು ಇದರ ಬಗ್ಗೆ ಪ್ರಶ್ನಿಸಿದಾಗ ಅಬೂಸುಫ್‌ಯಾನ್ ಹೀಗೆ ಉತ್ತರಿಸಿದನು: ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಎಂದಿಗೂ ಒಪ್ಪಂದವನ್ನು ಉಲ್ಲಂಘಿಸಿಲ್ಲ.

ಮಹಿಳೆಯರನ್ನು ಮರಳಿಸುವುದಕ್ಕೆ ಸಂಬಂಧಿಸಿದ ಆಕ್ಷೇಪದ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸಹೀಹ್ ಬುಖಾರಿಯಲ್ಲಿರುವ ಪದಗಳನ್ನು ಉಲ್ಲೇಖಿಸುತ್ತಾ ಹೀಗೆ ಹೇಳುತ್ತಾರೆ: ಒಪ್ಪಂದ ಪತ್ರದಲ್ಲಿ ಸ್ಪಷ್ಟವಾಗಿ ಪುರುಷ ಎಂಬ ಪದ ಇರುವಾಗ ಈ ರೀತಿ ಆಕ್ಷೇಪ ಎತ್ತುವುದು ಅನ್ಯಾಯ ಮಾತ್ರವಲ್ಲ ಕೃತಘ್ನತೆ ಕೂಡಾ ಆಗಿದೆ. ಒಪ್ಪಂದದ ವಾಕ್ಯಗಳಲ್ಲಿ 'ಪುರುಷ' ಎಂಬ ಪದಕ್ಕೆ ಬದಲಾಗಿ ಪುರುಷರಿಗೂ ಸ್ತ್ರೀಯರಿಗೂ ಅನ್ವಯಿಸುವ ಪದವನ್ನು ಪ್ರಯೋಗಿಸಲಾಗಿದೆ ಎಂದು ಚರಿತ್ರೆಯ ಇತರ ಕೆಲವು ವರದಿಗಳಿಂದ ತಿಳಿದುಬರುತ್ತದೆಯಲ್ಲಾ ಎಂದು ಆಕ್ಷೇಪಿಸುವುದಾದರೆ ಅದಕ್ಕಿರುವ ಉತ್ತರವೇನೆಂದರೆ, ಮೊದಲನೆಯದಾಗಿ, 'ಪುರುಷ' ಎಂಬ ಪದವಿರುವ ಪ್ರಬಲ ವರದಿಗಳಿಗೆ ಪ್ರಥಮ ಸ್ಥಾನವಿರುವುದಾಗಿ ಗಣಿಸಲಾಗುವುದು. ಎರಡನೆಯದಾಗಿ, 'ಪುರುಷ' ಎಂಬ ಪದಕ್ಕೆ ಬದಲಾಗಿ ಬೇರೆ ಪದವನ್ನು ಪ್ರಯೋಗಿಸಿದ ವಾಕ್ಯಗಳಲ್ಲೂ ಅದನ್ನೇ ಉದ್ದೇಶಿಸಲಾಗಿದೆ. ಉದಹಾರಣೆಗೆ, ಸೀರತ್ ಇಬ್ನು ಹಿಶಾಮಿನಲ್ಲಿ ಬಂದಿರುವ ವಾಕ್ಯಗಳಲ್ಲಿ ಪುರುಷ ಎಂಬ ಪದವಿಲ್ಲ. ಆದರೆ ಅದರಲ್ಲಿ ಪ್ರಯೋಗಿಸಿದ ಎಲ್ಲ ಸರ್ವನಾಮಗಳು ಮತ್ತು ಪದಗಳು ಪುರುಷರಿಗಾಗಿ ಉಪಯೋಗಿಸುವುದೇ ಆಗಿವೆ.

ಎರಡನೇ ಆಕ್ಷೇಪ ಅಬೂ ಬಸೀರಿನ ಘಟನೆಗೆ ಸಂಬಂಧಿಸಿದ್ದಾಗಿದೆ. ಯೋಚಿಸಿ ನೋಡುವಾಗ ಇದು ಕೂಡ ಪೊಳ್ಳು ಆಕ್ಷೇಪವೆಂದು ತಿಳಿದುಬರುತ್ತದೆ. ನಿಸ್ಸಂಶಯವಾಗಿಯೂ ಹಝ್ರತ್ ಪೈಗಂಬರ್(ಸ) ಒಪ್ಪಂದ ಮಾಡಿಕೊಂಡಿದ್ದರು. ಆದರೆ ಹಝ್ರತ್ ಪೈಗಂಬರ್(ಸ) ಈ ಒಪ್ಪಂದದ ಉಲ್ಲಂಘನೆ ಮಾಡಿದ್ದರೋ ಎಂಬುದಾಗಿದೆ ಪ್ರಶ್ನೆ. ಖಂಡಿತವಾಗಿಯೂ ಇಲ್ಲ. ಹಝ್ರತ್ ಪೈಗಂಬರ್(ಸ) ಆದರೋ ಒಪ್ಪಂದದ ಪಾಲನೆಯ ಮಹತ್ತಾದ ಮಾದರಿಯನ್ನು ತೋರಿಸಿದರು.

ನೋಡಿರಿ, ಅಬೂಬಸೀರ್ ಇಸ್ಲಾಮಿನ ಸತ್ಯತೆಯನ್ನು ಮನದಟ್ಟು ಮಾಡಿಕೊಂಡು ಮಕ್ಕಾದಿಂದ ಪರಾರಿಯಾಗಿ ರಹಸ್ಯವಾಗಿ ಮದೀನಕ್ಕೆ ತಲುಪುತ್ತಾನೆ. ಆದರೆ ಅವನ ದುಷ್ಟ ಸಂಬಂಧಿಕರು ಆತನನ್ನು ಹಿಂಬಾಲಿಸಿ ಮದೀನಕ್ಕೆ ತಲುಪುತ್ತಾರೆ. ಅವನನ್ನು ಒತ್ತಾಯಪೂರ್ವಕವಾಗಿ ಖಡ್ಗಬಲದಿಂದ ಮರಳಿ ಕೊಂಡುಹೋಗಲು ಅವರು ಬಯಸುತ್ತಾರೆ. ಉಭಯ ಪಕ್ಷದವರು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾಗುತ್ತಾರೆ. ಅಬೂಬಸೀರ್ ದೀನ ಸ್ವರದಲ್ಲಿ ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ವಿನಂತಿಸುತ್ತಾರೆ: ಯಾ ರಸೂಲಲ್ಲಾಹ್, ನನಗೆ ಅಲ್ಲಾಹನು ಇಸ್ಲಾಮ್ ಎಂಬ ಅನುಗ್ರಹವನ್ನು ದಯಪಾಲಿಸಿದ್ದಾನೆ. ಮಕ್ಕಾಗೆ ಮರಳಿ ಹೋದರೆ ಅಲ್ಲಿ ದುಃಖ ಮತ್ತು ಕಷ್ಟತೆಯ ಜೀವಿತವನ್ನು ನಾನು ನನ್ನ ಮುಂದೆ ಕಾಣುತ್ತಿದ್ದೇನೆ. ನಿಮಗೆ ಅದರ ಅರಿವಿದೆ. ಆದ್ದರಿಂದ ದಯವಿಟ್ಟು ನನ್ನನು ಮರಳಿಸದಿರಿ. ಮತ್ತೊಂದೆಡೆ ಅಬೂಬಸೀರಿನ ಸಂಬಂಧಿಕರು ಒಪ್ಪಂದದ ಬಗ್ಗೆ ಪ್ರಸ್ತಾಪಿ ಅವನನ್ನು ಮರಳಿಸಲು ಹೇಳುತ್ತಾರೆ. ಹಝ್ರತ್ ಪೈಗಂಬರ್(ಸ)ರ ಹೃದಯದಲ್ಲಿ ತೀವ್ರ ದುಃಖವಿತ್ತು. ಆದರೆ ಅಂತಹ ಸಮಯದಲ್ಲೂ ಹಝ್ರತ್ ಪೈಗಂಬರ್(ಸ) ವಾಗ್ದಾನ ಪಾಲನೆ ಮತ್ತು ಪ್ರಾಮಾಣಿಕತೆಯ ಬಗ್ಗೆ ಪೂರ್ಣವಾದ ಕಾಳಜಿವಹಿಸಿ ಉತ್ಕೃಷ್ಟ ಮಾದರಿ ತೋರಿಸಿದರು.

ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಬೂ ಬಸೀರ್, ನಾವು ಈ ಜನರೊಡನೆ ಒಪ್ಪಂದವನ್ನು ಮಾಡಿದ್ದು ನಿನಗೆ ಗೊತ್ತಿದೆ. ನಮ್ಮ ಧರ್ಮದಲ್ಲಿ ವಾಗ್ದಾನದ ಉಲ್ಲಂಘನೆ ಮಾಡುವುದು ಅನುಮತನೀಯವಲ್ಲ. ಆದ್ದರಿಂದ ನೀನು ಈ ಜನರ ಜೊತೆಗೆ ಹೋಗು. ಅನಂತರ ನೀನು ಇಸ್ಲಾಮ್ ಧರ್ಮದಲ್ಲಿ ಸಹನೆ ಮತ್ತು ಸ್ಥಿರಚಿತ್ತತೆಯಿಂದ ಇರುವುದಾದರೆ ನಿನಗೂ ನಿನ್ನಂತಹ ಪೀಡಿತರಿಗಾಗಿಯೂ ಅಲ್ಲಾಹನು ಸ್ವತಃ ವಿಮೋಚನೆಯ ಮಾರ್ಗವನ್ನು ತೆರೆಯುವನು. ಹಝ್ರತ್ ಪೈಗಂಬರ್(ಸ)ರ ಈ ನಿರ್ದೇಶನದಂತೆ ಅಬೂ ಬಸೀರ್ ಮರಳಿ ಹೋದನು. ಅದಲ್ಲದೆ ಮಕ್ಕಾದಿಂದ ಹೊರಟ ಯಾವ ವ್ಯಕ್ತಿ ಎಲ್ಲಿದ್ದರೂ ಆತನನ್ನು

ಮಕ್ಕಾಗೆ ಮರಳಿಸುವ ಹೊಣೆಗಾರಿಕೆ ಹಝ್ರತ್ ಪೈಗಂಬರ್^(ಸ)ರದ್ದಾಗಿದೆ ಎಂದು ಈ ಘಟನೆಯ ನಂತರದ ವಿವರಣೆಗಳಿಗೆ ಸಂಬಂಧಿಸಿ ಆಕ್ಷೇಪಿಸುವುದಾದರೆ, ಒಪ್ಪಂದದಲ್ಲಿ ಅಂತಹ ಯಾವುದೇ ನಿಬಂಧನೆಯಿರಲಿಲ್ಲ ಎಂಬುದಾಗಿದೆ ಅದಕ್ಕಿರುವ ಉತ್ತರ. ಮದೀನದ ರಾಜ್ಯದಿಂದ ಹೊರಗೆ ಇರುವ ಜನರನ್ನು ಮಕ್ಕಾಗೆ ಮರಳಿಸುವ ಹೊಣೆ ಹಝ್ರತ್ ಪೈಗಂಬರ್^(ಸ)ರದ್ದು ಎಂದು ಹೇಳುವುದು ಮೂರ್ಖತನವಾಗಿದೆ. ಒಪ್ಪಂದದ ನಿಬಂಧನೆಗಳನ್ನು ಮಕ್ಕಾದ ಸತ್ಯನಿಷೇಧಿಗಳು ಸ್ವತಃ ಇರಿಸಿದ್ದರು. ಅವರು ನೆಟ್ಟ ಮುಳ್ಳು ಅವರನ್ನೇ ಚುಚ್ಚಿತು. ನಿಸ್ಸಂಶಯವಾಗಿಯೂ ಅಬೂ ಬಸೀರಿನ ಜೊತೆಗೆ ಆ ಪ್ರದೇಶದಲ್ಲಿ ಒಟ್ಟುಗೂಡಿದ ಜನರು ಧಾರ್ಮಿಕವಾಗಿ ಮುಸ್ಲಿಮರಾಗಿದ್ದರು. ಆದರೆ ರಾಜಕೀಯವಾಗಿ, ಆಡಳಿತ ಪರವಾಗಿ ಮತ್ತು ನಿಯಮಪರವಾಗಿ ಹಝ್ರತ್ ಪೈಗಂಬರ್^(ಸ)ರಿಗೆ ಅವರ ಮೇಲೆ ಯಾವುದೇ ಅಧಿಕಾರವಿರಲಿಲ್ಲ. ಅವರು ರಾಜಕೀಯವಾಗಿ ಹಝ್ರತ್ ಪೈಗಂಬರ್^(ಸ)ರ ಅಧೀನದಲ್ಲಿ ಬರಲಾರರು ಎಂಬ ನಿಬಂಧನೆ ಸತ್ಯನಿಷೇಧಿಗಳು ಸ್ವತಃ ಇರಿಸಿದ್ದರು. ಸತ್ಯನಿಷೇಧಿಗಳು ಸ್ವತಃ ಆ ಮುಸ್ಲಿಮರನ್ನು ಹಝ್ರತ್ ಪೈಗಂಬರ್^(ಸ)ರ ರಾಜಕೀಯದಿಂದ ಹೊರಗೆ ಇರಿಸಿರುವಾಗ ಹಝ್ರತ್ ಪೈಗಂಬರ್^(ಸ)ರನ್ನು ಆಕ್ಷೇಪಿಸುವುದೇಕೆ? ಮಕ್ಕಾದ ಸತ್ಯನಿಷೇಧಿಗಳ ಕುತಂತ್ರ ಅವರಿಗೇ ತಿರುಗೇಟಾಯಿತು. ಹಝ್ರತ್ ಪೈಗಂಬರ್^(ಸ)ರ ಪರಿಶುದ್ಧವಾದ ಸೆರಗು ಪರಿಶುದ್ಧವಾಗಿಯೇ ಉಳಿಯಿತು. ಒಪ್ಪಂದದ ನಿಬಂಧನೆಯನ್ನು ಹಝ್ರತ್ ಪೈಗಂಬರ್^(ಸ) ಪಾಲಿಸುತ್ತಾ ಅಬೂ ಬಸೀರ್ ಮತ್ತು ಅವನ ಸಂಗಡಿಗರನ್ನು ಮದೀನದಿಂದ ಬೀಳ್ಕೊಟ್ಟರು. ಅನಂತರ ಹಝ್ರತ್ ಪೈಗಂಬರ್^(ಸ) ಒಪ್ಪಂದದಲ್ಲಿ ಉದ್ದೇಶಿಸಿದ್ದನ್ನು ಕೂಡ ಪಾಲಿಸುತ್ತಾ ಅಬೂ ಬಸೀರ್ ಮತ್ತು ಅವನ ಸಂಗಡಿರನ್ನು ತನ್ನ ರಾಜಕೀಯ ಕ್ಷೇತ್ರದ ಹೊರಗೆ ಇರಿಸಿದರು. ಆದರೆ ಆಕ್ಷೇಪಕರು ನ್ಯಾಯ ನೀತಿ ನೋಡದೆ ಇಸ್ಲಾಂ ಮತ್ತು ಹಝ್ರತ್ ಪೈಗಂಬರ್^(ಸ)ರ ಕುರಿತು ನಿರಾಧಾರ ಆಕ್ಷೇಪಗಳನ್ನು ಮಾಡುತ್ತಾರೆ.

(ಖುತ್ಬದ ಕೊನೆಯಲ್ಲಿ ಹುಝೂರ್ ಹೇಳಿದರು:) ಇಂದು ಕೂಡ ನ್ಯಾಯದ ಬಗ್ಗೆ ವಾದಿಸುವವರದ್ದು ಇದೇ ದ್ವಿಮುಖ ಧೋರಣೆಯಾಗಿದೆ. ಇದುವೇ ಇಂದು ಕೂಡ ಲೋಕದಲ್ಲಿ ಗೊಂದಲವನ್ನು ಸೃಷ್ಟಿಸಿದೆ. ಅಲ್ಲಾಹನು ಲೋಕವನ್ನು ಮತ್ತು ವಿಶಿಷ್ಟವಾಗಿ ಮುಸ್ಲಿಮರನ್ನು ದಜ್ಜಾಲಿನ ಈ ಪಿತೂರಿಗಳಿಂದ ರಕ್ಷಿಸಲಿ.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

At, ***'Masjid Mubarak',*** *Islamabad, Tilford,* U.K. On 06-12-2024

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon